## ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಪಿ.ಇ.ಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ ಇಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಹೊಂದಿದ ಅಭ್ಯರ್ಥಿಗಳ ಆಯ್ಕೆಯನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿ:03.10.81 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್ಇ/2009 ದಿ:24-12-2009.
3) ಸರ್ಕಾರದ ಪತ್ರ ಸಂಖ್ಯೆ: ಇಡಿ/287/ಯುಪಿಸಿ/2015, ದಿನಾಂಕ:04.04.2016
4) ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 06.04.2016.
5) ಮೈಸೂರಿನ ಪ್ರಾದೇಶಿಕ ಜಂಟಿ ನಿರ್ದೇಶಕರ ಪತ್ರ ಸಂಖ್ಯೆ: ಪ್ರಾಕಮೈ/ಕಾಶಿಇ /06/ಖಾಹುಭ/ಜನಿಟ್ರ/ 2011(ಭಾಗ-2), ದಿನಾಂಕ:12.07.2016 ಮತ್ತು 20.09.2016
6) ಮಂಡ್ಯ ಜಿಲ್ಲಾಧಿಕಾರಗಳ ಪತ್ರ ಸಂಖ್ಯೆ:ಉ/ನಿ/ಸಕಿ/ಮಂ/ಸಿಂಧುತ್ವ/ ಸಿಆರ್/28/2016-17, ದಿನಾಂಕ:01.09.2016
7) ಮಂಡ್ಯ ಜಿಲ್ಲೆ ಪೋಲೀಸ್ ಅದೀಕ್ಷಕರ ಪತ್ರ ಸಂಖ್ಯೆ:ಎಸ್.ಬಿ /ವಿಆರ್ಎ/762 /2016, ದಿನಾಂಕ:24.08.2016 ಮತ್ತು ಎಸ್.ಬಿ /ವಿಆರ್ಎ/956 /2016, ದಿನಾಂಕ:14.11.2016

******

ಪ್ರಸ್ತಾವನೆ: 21-2-17

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಪಿ.ಇ.ಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ ಇಲ್ಲಿ ಖಾಲಿ ಇರುವ ಕನ್ನಡ ವಿಷಯದ 02 ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಆಯ್ಕೆ ಸಮಿತಿ ಮೂಲಕ ಭರ್ತಿ ಮಾಡಿಕೊಳ್ಳಲು ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ ಅನುಮತಿ ನೀಡಿದ್ದು, ಉಲ್ಲೇಖ (4)ರ ಈ ಕಛೇರಿಯ ಪತ್ರದಲ್ಲಿ ಆಡಳಿತ ಮಂಡಳಿಯವರಿಗೆ ಸದರಿ 02 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಅದರಂತೆ ಆಡಳಿತ ಮಂಡಳಿ ಜಾಹಿರಾತು ಪ್ರಕಟಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಆಯ್ಕೆ ಸಮಿತಿ ಮೂಲಕ ಸಂದರ್ಶನ ನಡೆಸಿ, ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಂಡು ಅನುಮೋದನೆಗೆ ಉಲ್ಲೇಖ (5) ರ ಪತ್ರದಲ್ಲಿ ಪ್ರಸ್ತಾವನೆಯನ್ನು ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರು ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಕನ್ನಡ ವಿಷಯದ 02 ಖಾಲಿ ಹುದ್ದೆಗೆ ಆಯ್ಕೆ ಸಮಿತಿ ಮೂಲಕ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ಉಲ್ಲೇಖ (1) ಮತ್ತು (2) ರ ಆದೇಶಗಳನ್ವಯ ನಿಗದಿತ ವಯೋಮಿತಿ ಹಾಗೂ ವಿದ್ಯಾರ್ಹತೆ ಹೊಂದಿದ್ದು, ಉಲ್ಲೇಖ (6) ಮತ್ತು (7) ರಲ್ಲಿ ಅಭ್ಯರ್ಥಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕಳುಹಿಸಿರುತ್ತಾರೆ ಹಾಗೂ ಇವರ ವಿರುದ್ಧ ಯಾವುದೇ ವಿಧವಾದ ಕ್ರಿಮಿನಲ್ ಮೊಕದ್ದಮೆ ವರದಿಯಾಗಿರುವುದಿಲ್ಲವೆಂದು ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧೀಕ್ಷಕರು ವರದಿಯಲ್ಲಿ ತಿಳಿಸಿರುತ್ತಾರೆ ಆದ್ದರಿಂದ ಸದರಿಯವರುಗಳ ನೇಮಕಾತಿಗೆ ಅನುಮೋದನೆ ನೀಡಲು ಈ ಆದೇಶ.

**<u>ಆದೇಶ ಸಂಖ್ಯೆ: ಕಾಶಿಇ/95/ಖಾಹುಭ/2007-08/ನೇವಿ-2, ಬೆಂಗಳೂರು, ದಿನಾಂಕ:20.02.2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಪಿ.ಇ.ಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ ಇಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಿರುವ ಈ ಕೆಳಕಂಡ ಅಭ್ಯರ್ಥಿಗಳ ನೇಮಕಾತಿಯನ್ನು ಅವರ ಹೆಸರಿನ ಮುಂದೆ ತಿಳಿಸಿರುವ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದಿಸಲಾಗಿದೆ.

| ಕ್ರ.ಸಂ | ಹೆಸರು & ಪದನಾಮ | ಜನ್ಮ ದಿನಾಂಕ | ವಿದ್ಯಾರ್ಹತೆ | ವರ್ಗ | ವೇತನ ಶ್ರೇಣಿ |
|---|---|---|---|---|---|
| 1 | 2 | 3 | 4 | 5 | 6 |
| 01 | ಡಾ.ಶ್ರೀನಿವಾಸಯ್ಯ ಎನ್.ವೈ ಕನ್ನಡ ಸಹಾಯಕ ಪ್ರಾಧ್ಯಾಪಕರು | 12.07.1975 | ಎಂ.ಎ ಎನ್.ಇ.ಟಿ | ಎಸ್.ಸಿ | ರೂ. 15600-39100 +ಎಜಿಪಿ 6000 |

| | | | | | |
|---|---|---|---|---|---|
| 02 | ವಿರೇಶ ಎಸ್.ಕೆ<br>ಕನ್ನಡ ಸಹಾಯಕ<br>ಪ್ರಾಧ್ಯಾಪಕರು | 01.11.1977 | ಎಂ.ಎ<br>ಎನ್.ಇ.ಟಿ | ಸಾ.ವ | ರೂ. 15600-39100<br>+ಎಜಿಪಿ 6000 |

**ಷರತ್ತುಗಳು:-**

1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿನಾಂಕ:03.10.81 ಮತ್ತು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ಮತ್ತು ಹೊರಡಿಸುವ ತಿದ್ದುಪಡಿ ಆದೇಶ ಹಾಗೂ ಮುಂದೆ ಸರ್ಕಾರ ವಿಧಿಸಬಹುದಾದ ಷರತ್ತುಗಳಿಗೆ ಈ ನೇಮಕಾತಿ ಒಳಪಟ್ಟಿರುತ್ತದೆ.
2) ಸದರಿ ಅಭ್ಯರ್ಥಿಯ ನೇಮಕಾತಿಯು ಈ ಆದೇಶದ ದಿನಾಂಕದ ನಂತರ ಅವರು ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಯಾವುದೇ ಹಿಂದಿನ ವೇತನ ಬಾಕಿಗೆ ಅರ್ಹರಿರುವುದಿಲ್ಲ.
3) ಸದರಿಯವರ ನೇಮಕಾತಿಯ ಸೇವಾ ವಿವರಗಳು ಕಾಲೇಜಿನ ಸ್ಥಳೀಯ ಲೆಕ್ಕ ಪತ್ರ ತನಿಖಾ ಸಮಯದಲ್ಲಿ ಪರಿಶೀಲನೆಗೆ ಒಳಪಟ್ಟಿರುತ್ತದೆ. ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾಲೇಜಿಗೆ ನೀಡುತ್ತಿರುವ ಅನುದಾನವನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಕಾಯ್ದಿರಿಸಿದೆ.
4) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಈ ಸಂಬಂಧ ಇಲಾಖೆ/ಸರ್ಕಾರ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
5) ಅಭ್ಯರ್ಥಿಯು 06 ತಿಂಗಳೊಳಗಾಗಿ ಅಂಗೀಕೃತ ಸಂಸ್ಥೆಗಳಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು ಹಾಗೂ ತೇರ್ಗಡೆಯಾದ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸತಕ್ಕದ್ದು.
6) ಮೇಲ್ಕಂಡ ಅಭ್ಯರ್ಥಿಗೆ ಅವರು ಕೆಲಸಕ್ಕೆ ಹಾಜರಾದ ನಂತರ ಸರ್ಕಾರಿ ಆದೇಶ ಸಂಖ್ಯೆ: FD(Spl) 04/PET/2005, ದಿನಾಂಕ:31-03-2006ರನ್ವಯ ಹೊಸ ವಂತಿಕೆ ಪಿಂಚಣಿ ಯೋಜನೆ ಅನ್ವಯಿಸುವುದು. ಸದರಿ ಆದೇಶದ ಕಂಡಿಕೆ (8)ರಲ್ಲಿ ತಿಳಿಸಿರುವಂತೆ ದಿನಾಂಕ:01.04.2006ರ ನಂತರ ಸೇವೆಗೆ ಸೇರುವ/ಅನುದಾನಕ್ಕೊಳಪಡುವ ಸಿಬ್ಬಂದಿಗಳಿಗೆ ಹಿಂದಿನ ವ್ಯಾಖ್ಯಾನಿಸಿದ ಪಿಂಚಣಿ ಯೋಜನೆ (The Defined Benefit Pension Scheme)ಅನ್ವಯಿಸುವುದಿಲ್ಲ. ಹೊಸ ಪಿಂಚಣಿ ಯೋಜನೆಯು ಅವರಿಗೆ ಐಚ್ಛಿಕವಾಗಿ ಅನ್ವಯಿಸುತ್ತಿದ್ದು, ಆಡಳಿತ ಮಂಡಳಿ & ಸಿಬ್ಬಂದಿ ಇಬ್ಬರೂ ಒಪ್ಪಿರತಕ್ಕದ್ದೆಂದೂ ಆದರೆ ನೇಮಕಾತಿ ಪ್ರಾಧಿಕಾರದ ವಂತಿಕೆಯನ್ನು ಆಯಾ ಕಾಲೇಜುಗಳ ಆಡಳಿತ ಮಂಡಳಿಗಳು ಭರಿಸಬೇಕೆಂದು ಹಾಗೂ ಸರ್ಕಾರವು ವಂತಿಕೆಯನ್ನು ಭರಿಸುವುದಿಲ್ಲವೆಂದೂ ಈ ಮೂಲಕ ತಿಳಿಸಲಾಗಿದೆ.
7) ಮೇಲೆ ತಿಳಿಸಿರುವ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ ಹಾಗೂ ದಾಖಲಾತಿಗಳು ತಪ್ಪೆಂದು ಕಂಡು ಬಂದಲ್ಲಿ ಸದರಿ ನೇಮಕಾತಿ ಆದೇಶವನ್ನು ಕೂಡಲೇ ರದ್ದು ಪಡಿಸಲಾಗುವುದು.

"ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

Sulpay

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು - ಇವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ - ಸದರಿ ಅಭ್ಯರ್ಥಿಗಳ ವಾರ್ಷಿಕ ವೇತನ ಪಟ್ಟಿಗೆ ಅನುಮೋದನೆ ನೀಡುವಾಗ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಬೇಕೆಂಬ ಸೂಚನೆಯೊಂದಿಗೆ ಹಾಗೂ ಸುಳ್ಳು ದಾಖಲಾತಿಗಳಿದ್ದಲ್ಲಿ ಸದರಿ ಅನುಮೋದನೆ ರದ್ದುಗೊಳಿಸಲು ಪ್ರಸ್ತಾವನೆಯನ್ನು ಈ ಕಛೇರಿಗೆ ಕಳುಹಿಸುವ ಷರತ್ತಿಗೊಳಪಟ್ಟಿರುತ್ತದೆ.
2) ಅಧ್ಯಕ್ಷರು/ಕಾರ್ಯದರ್ಶಿಗಳು, ಜನತಾ ಶಿಕ್ಷಣ ಸಂಸ್ಥೆ(ರಿ), ಮಂಡ್ಯ - ಮಾಹಿತಿಗಾಗಿ.
3) ಪಿ.ಇ.ಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ. ಅಗತ್ಯ ಕ್ರಮಕ್ಕಾಗಿ.

**ಪ್ರತಿ ರವಾನೆ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು - 1 - ಮಾಹಿತಿಗಾಗಿ.
2) ಲೆಕ್ಕಾಧಿಕಾರಿಗಳು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಮಾಹಿತಿಗಾಗಿ.
3) ಕಛೇರಿ ಪ್ರತಿ.

21/2/17